ಅ) ವಿಷ್ಣು ಬ್ಯಾಂಕ್ ನೆರವಿನಿಂದ ಅಥಣಿಕೋಲಾ ಹುಬ್ಬಳ್ಳಿ ರಸ್ತೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ.

ಆ) 65.00 ಕೋಟಿ ರೂ.ಗಳು.

ಇ) 132.4 ಕಿ.ಮೀ ರಸ್ತೆಯನ್ನು ಅಭಿವೃದ್ಧಿಗೊಳಿಸಲಾಗುವುದು.

ಈ) ಗುತ್ತಿಗೆಯನ್ನು ಗೊತ್ತುಪಡಿಸಲಾಗಿದೆ.

ಉ) 1) ಅಂಕೋಲಾ - ಹುಬ್ಬಳ್ಳಿ ರಸ್ತೆಯು ಕಿ.ಮೀ.ನಿಂದ 75ನೇ ಕಿ.ಮೀ.ರವರೆಗೆ ಮೆಸರ್ಸ್ ಓರಿಯಂಟಲ್ ಸ್ಟ್ರಕ್ಚರಲ್ ಇಂಜಿನಿಯರ್ಸ್ ಲಿಮಿಟೆಡ್ ನ್ಯೂಡೆಲ್ಲಿ ರವರಿಗೆ ಗುತ್ತಿಗೆ ವಹಿಸಿದ್ದು ಗುತ್ತಿಗೆಯ ಒಟ್ಟು ಮೌಲ್ಯ 37.16 ಕೋಟಿ ರೂ.ಗಳು ದಿನಾಂಕ 31.4.1991 ರಂದು ಗುತ್ತಿಗೆ ಕರಾರು ಮಾಡಿಕೊಂಡಿದ್ದಾರೆ.

2) 75ನೇ ಕಿ.ಮೀ.ನಿಂದ 132.4 ಕಿ.ಮೀ ವರೆಗೆ ಮೆಸರ್ಸ್ ಪ್ರೊಗ್ರೇಸಿವ್ ಶೀನಯ್ಯ ಅಂಡ್ ಕಂಪನಿ ಹೈದರಾಬಾದ್‌ರವರಿಗೆ ಗುತ್ತಿಗೆಯನ್ನು ವಹಿಸಿದ್ದು ದಿನಾಂಕ 26.4.1991 ರಂದು ಗುತ್ತಿಗೆ ಕರಾರನ್ನು ಮಾಡಿಕೊಂಡಿದ್ದಾರೆ. ಗುತ್ತಿಗೆಯ ಒಟ್ಟು ಮೌಲ್ಯ 20.10 ಕೋಟಿ ರೂ.ಗಳು.

3) ಈ ಇಬ್ಬರೂ ಕಾಮಗಾರಿಯನ್ನು ಪ್ರಾರಂಭ ಮಾಡಿದ್ದಾರೆ.

ಕಳ್ಳಂಬಳ್ಳಿ ಕೆರೆಯ ದುರಸ್ತಿ ಬಗ್ಗೆ.

190-ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕೆರೆಯು ಇತ್ತೀಚಿನ ಮಳೆಯಿಂದಾಗಿ ಒಡೆದು ಹೋಗುವ ಸಂಭವವಿದ್ದು ಅದು ಇನ್ನೂ ಅಪಾಯ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರ ಶಾಶ್ವತ ಪರಿಹಾರಕ್ಕಾಗಿ ತಾಂತ್ರಿಕ ಸಲಹೆ ಏನು?

ಇ) ತಾಂತ್ರಿಕ ಸಲಹೆಯನ್ನು ಸರ್ಕಾರ ಯಾವ ರೀತಿಯಿಂದ ಪರಿಶೀಲಿಸಿದೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು) :

ಅ) ಬಂದಿದೆ.

ಆ) ಶಾಶ್ವತ ಪರಿಹಾರಕ್ಕಾಗಿ 67.68 ಲಕ್ಷ ರೂ.ಗಳ ಅಂದಾಜು ತಯಾರಾಗಿದ್ದು ಪರಿಶೀಲನೆಯಲ್ಲಿದೆ.

ಶಿರಾ ಪಟ್ಟಣಕ್ಕೆ ಬೈಪಾಸ್ ರಸ್ತೆ ಬಗ್ಗೆ

189-ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಲ್ಲಿ ಶಿರಾ ಪಟ್ಟಣಕ್ಕೆ ಬೈಪಾಸ್‌ಗಾಗಿ ಸರ್ಕಾರ ಯೋಜನೆ ನಿರೂಪಿಸಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಕೈಗೊಳ್ಳಲಾಗುವುದು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಹೌದು.